# ಮಹಿಳೆ ಮತ್ತು ಸಮಾಜ

**ಪ್ರಕಾಶ (ರಂಜೇರೆ)**[1]
ಕನ್ನಡ ವಿಭಾಗ
ಸಂತ ಫ್ರಾನ್ಸಿಸ್ ಡಿ ಸೇಲ್ಸ್ ಕಾಲೇಜು
ಬೆಂಗಳೂರು.

**ಕಿಟ್ಟಪ್ಪ ಆರ್.**[2]
ಕನ್ನಡ ವಿಭಾಗ
ಸಂತ ಫ್ರಾನ್ಸಿಸ್ ಡಿ ಸೇಲ್ಸ್ ಕಾಲೇಜು
ಬೆಂಗಳೂರು.

**Article Link: https://aksharasurya.com/2024/02/prakasha-kittappa-r.php**

## ABSTRACT:

ಸ್ತ್ರೀಯರು ಪುರುಷರಿಗೆ ಸಮಾನರೆಂದು ಸಂವಿಧಾನದಲ್ಲಿ ಘೋಷಿತವಾದರೂ ವಾಸ್ತವದಲ್ಲಿ ಅದು ಸಾಧ್ಯವೇ ಆಗದಂಥಹ ಸ್ಥಿತಿ, ದೇಶ ಸ್ವತಂತ್ರವಾಗಿ ಅರ್ಧ ಶತಮಾನ ಕಳೆದರೂ ಉಳಿದುಕೊಂಡೇ ಬಂದಿದೆ: ಅದು ಮುಂದುವರಿಯುತ್ತಲೇ ಇದೆ. ಸ್ವಾತಂತ್ರ್ಯ ಹಾಗೂ ಸಮಾನತೆಗಳಿಗೆ ಸಂಬಂಧಿಸಿದಂತೆ ಸ್ತ್ರೀಯರ ಮಟ್ಟಿಗೆ ಬದಲಾವಣೆಯ ವೇಗ ಆಮೆಯ ನಡಿಗೆಯಂತೆ ನಿಧಾನವಾಗಿದೆ. ಲಿಂಗಭೇದದ ನೆಲೆಯಲ್ಲಿ ಮಾನವ ಜನಾಂಗವನ್ನು ಸ್ತ್ರೀ ಮತ್ತು ಪುರುಷರು ಎಂದು ಎರಡು ವರ್ಗಗಳಾಗಿ ಭಾಗ ಮಾಡಿರುವುದು ಸಹಜವೇ. ಇದೇ ಕಾರಣಕ್ಕಾಗಿ ಈ ಎರಡೂ ಗುಂಪುಗಳ ನಡುವೆ ಹೆಚ್ಚಿನ ವ್ಯತ್ಯಾಸಗಳು ಹುಟ್ಟಿಕೊಂಡಿವೆ. ಸ್ತ್ರೀ–ಪುರುಷರ ಪಾತ್ರಗಳು, ಕರ್ತವ್ಯಗಳು, ಹೊಣೆಗಾರಿಕೆಗಳು, ಅಂತಸ್ತುಗಳು ಮತ್ತು ನಿಯಮಗಳು ಯಾವುದೇ ಸಮಾಜದಲ್ಲಾದರೂ ಒಂದೇ ರೀತಿಯಾಗಿರಲು ಅಥವಾ ಸಮಾನವಾಗಿರಲು ಸಾಧ್ಯವಾಗಿಲ್ಲ. ಕೆಲವರು ಮಹಿಳೆಯರ ಸ್ಥಿತಿಗತಿಯ ಬಗ್ಗೆ ತಮ್ಮ ಸಂಕುಚಿತ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ ಮತ್ತು ಭಾರತೀಯ ಸ್ತ್ರೀಯರ ಸ್ಥಿತಿಯನ್ನು ಕೀಳಾಗಿ ಚಿತ್ರಿಸಿದ್ದಾರೆ. ನಮ್ಮ ಪ್ರಾಚೀನ ಕಾಲದ ಧಾರ್ಮಿಕ ಪುರಾಣ ಗ್ರಂಥಗಳನ್ನು ಅವಲೋಕಿಸಿದಾಗ ಈ ಅಭಿಪ್ರಾಯಗಳು ಆಧಾರ ರಹಿತವಾದವು ಎಂಬುದು ಗೊತ್ತಾಗುತ್ತದೆ. ಪುರುಷ ಮತ್ತು ಮಹಿಳೆ ಒಂದು ನಾಣ್ಯದ ಎರಡು ಮುಖಗಳು. ಪುರುಷರನ್ನು ಹೊರತು ಪಡಿಸಿದ ಮಹಿಳೆಯ ಜೀವನ ಅಥವಾ ಮಹಿಳೆಯನ್ನು ಹೊರತುಪಡಿಸಿದ ಪುರುಷನ ಜೀವನವನ್ನು ಕಲ್ಪಿಸಿಕೊಳ್ಳಲು ಸಹ ಸಾಧ್ಯವಿಲ್ಲ. ಮಹಿಳೆಯ ಸ್ಥಿತಿಯನ್ನು ಕುರಿತು ಚರ್ಚಿಸುವಾಗ ಸಾಮಾಜಿಕ ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯ ಪಾತ್ರವು ಪ್ರಮುಖವಾಗಿ ಕಂಡು ಬರುತ್ತದೆ.

ಪುರುಷ ಸಮಾಜವು ಬಹುಶಃ ಮಹಿಳೆಯನ್ನು ಕೇವಲ ಒಂದು ಭೋಗದ ವಸ್ತುವಾಗಿ, ಮಕ್ಕಳನ್ನು ಹೆರುವ ಯಂತ್ರವಾಗಿ ಪರಿಗಣಿಸಿರುವುದು ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ಮಹಿಳೆಯ ಸ್ಥಾನವನ್ನು ಕುರಿತು ಅಧ್ಯಯನ ಮಾಡುವಾಗ ಪುರುಷನ ಸ್ಥಾನದೊಂದಿಗೆ ಹೋಲಿಕೆ ಮಾಡಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ಮಹಿಳೆಯ ಸ್ಥಾನ ಯಾವುದು? ಎನ್ನುವ ಪ್ರಶ್ನೆ ನಮಗೆ ಎದುರಾಗುತ್ತದೆ. ಆದರೆ ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವುದು ಬಹಳ ಕಷ್ಟ. ಏಕೆಂದರೆ ಮಹಿಳೆಯ ಸ್ಥಿತಿ ಎಲ್ಲಾ ಕಾಲಕ್ಕೆ ತಕ್ಕಂತೆ ಅದು ಏರಿಳಿತಗಳನ್ನು ಅಥವಾ ಬದಲಾವಣೆಗಳನ್ನು ಹೊಂದುತ್ತಲೇ ಇದೆ.

## KEY WORDS:

ಸ್ತ್ರೀವಾದ, ಹೆಚ್.ಎಸ್.ಶ್ರೀಮತಿ, ಲಿಂಗ ಸಮಾನತೆ, ಮಹಿಳೆ, ಶಿಕ್ಷಣ, ಮಲ್ಲಿಕಾಘಂಟಿ, ಪ್ರಾಚೀನ ಸಮಾಜದಲ್ಲಿ ಸ್ತ್ರೀ.

ಭಾರತೀಯ ಸಮಾಜವು ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಹಲವಾರು ವೈವಿಧ್ಯತೆಗಳಿಂದ ಕೂಡಿದೆ. ಹಾಗೆಯೆ ಧಾರ್ಮಿಕ ನೆಲೆಗಟ್ಟಿನಲ್ಲಿ ವಿವೇಚಿಸುವುದಾದರೆ ಮನುಸ್ಮೃತಿ ಭಾರತೀಯ ಸಮಾಜದ ನಡಾವಳಿಗಳನ್ನು ರೂಪಿಸುವ ನಿಲುವನ್ನು ಹೊಂದಿದೆ. ಆದರೆ ಸ್ತ್ರೀ ಎಲ್ಲಾ ಸ್ತರವಿನ್ಯಾಸಗಳಲ್ಲೂ ತನ್ನದೇ ಆದ ಅಸ್ಮಿತೆಗಳಿಂದ ಗುರುತಿಸಿಕೊಂಡಿದ್ದಾಳೆ. ಅದರಲ್ಲೂ ಭಾರತೀಯ ಸಮಾಜವು ಸ್ತ್ರೀಗೆ ಪೂಜ್ಯ ಸ್ಥಾನವನ್ನು ನೀಡಿದೆ. ಅದಕ್ಕೆ "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರ ದೇವತಃ" ಎಂಬ ಮಾತು ಧರ್ಮದ ನೆಲೆಗಳಿಂದಲೇ ವಿವೇಚಿಸುವಂತದ್ದು. ಮುಂದುವರೆದು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎನ್ನುವ ಮಾತು ಹೆಣ್ಣಿಗೆ ಪೂಜ್ಯನೀಯ ಸ್ಥಾನ ನೀಡಿದರೂ ಸಮಾನತೆಗೆ ಅರ್ಹಳಲ್ಲ ಎಂಬ ಧೋರಣೆಯು ಮಹಿಳೆಯನ್ನು ಭೋಗದ ವಸ್ತುವಾಗಿ, ಮಕ್ಕಳನ್ನು ಹೆರುವ ಯಂತ್ರವಾಗಿ ಪರಿಗಣಿಸಿರುವುದು ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಸ್ತ್ರೀಯ ಸ್ಥಾನಮಾನವೇನು? ಸ್ತ್ರೀವಾದಿ ನೆಲೆಗಟ್ಟಿನಿಂದ ನೋಡಿದಾಗ ಉತ್ತರವನ್ನು ಹುಡುಕುವುದು ಕ್ಲಿಷ್ಟವಾದದ್ದು. ಏಕೆಂದರೆ ಮಹಿಳೆಯ ಸ್ಥಿತಿ ಕಾಲಮಾನಕ್ಕನುಗುಣವಾಗಿ ಏರಿಳಿತಗಳನ್ನು ಕಂಡಿದೆ.

**ವೇದಗಳ ಕಾಲದಲ್ಲಿ ಮಹಿಳೆಯ ಸ್ಥಿತಿಗತಿ:**

ಪೂರ್ವವೇದಗಳ ಕಾಲದಲ್ಲಿ ಮಹಿಳೆಯರು ಪುರುಷನಷ್ಟೇ ಅಧಿಕಾರ ಮತ್ತು ಸಮಾನ ಸ್ಥಾನವನ್ನು ಹೊಂದಿದ್ದರು. ಏಕೆಂದರೆ ಆಗಿನ್ನು ಮನುಸ್ಮೃತಿಯಾಗಲಿ, ಮನುಧರ್ಮವಾಗಲಿ ಚಾಲ್ತಿಯಲ್ಲಿರಲಿಲ್ಲ. ವ್ಯವಹಾರ, ವೃತ್ತಿಪರ ಧೋರಣೆಯ

ಮತ್ತು ಜ್ಞಾನ ಕೌಶಲ್ಯಗಳ ಮೇಲೆ ಅರ್ಹತೆಯನ್ನು ಪಡೆಯುತ್ತಿದ್ದರು. ಅವರನ್ನು ಪುರುಷರಂತೆಯೇ ಸಮಾನವಾಗಿ ಪರಿಗಣಿಸುತ್ತಿದ್ದುದಲ್ಲದೇ ಸಮಾನಹಕ್ಕು ಮತ್ತು ಸವಲತ್ತುಗಳನ್ನು ಹೊಂದಿದ್ದಳು. ಕೌಟುಂಬಿಕ ನೆಲೆಯಲ್ಲಿ ಗಂಡ ಮತ್ತು ಹೆಂಡತಿ ಇಬ್ಬರೂ ಯಾರೂ ಮೇಲಲ್ಲ, ಕೀಳಲ್ಲ ಎಂಬ ಸಮಾನ ಮನಸ್ಥಿತಿಯನ್ನು ಹೊಂದಿದ್ದರು. ವೇದಗಳಲ್ಲಿ ಒಂದಾದ ಋಗ್ವೇದದಲ್ಲಿ ಮಹಿಳೆಯರು ಉತ್ತಮ ಮಟ್ಟದ ಜೀವನ ಹೊಂದಿದ್ದರೆಂದು ಅವರ ಸ್ಥಿತಿಯ ಬಗ್ಗೆ ಬೆಳಕು ಚೆಲ್ಲುತ್ತದೆ.

**ಮಹಿಳೆ ಮತ್ತು ಶಿಕ್ಷಣ:**

ಪ್ರಾಚೀನ ಸಾಹಿತ್ಯ ಮತ್ತು ಶಾಸನಗಳಲ್ಲಿ ಉಲ್ಲೇಖಿಸಿದಂತೆ ನಾಗಾವಿ ಶಾಸನವು ಪುರುಷ ಮತ್ತು ಸ್ತ್ರೀಯರಿಗೆ ವಿದ್ಯಾಭ್ಯಾಸದಲ್ಲಿ ಸಮಾನ ಅವಕಾಶವನ್ನು ನೀಡಿತ್ತೆಂದು ಉಲ್ಲೇಖಿಸುತ್ತದೆ. ಹಾಗೆಯೇ ವೇದಗಳ ಕಾಲದ ಹಿನ್ನಲೆಯಲ್ಲಿ ನೋಡುವುದಾದರೆ ಪ್ರಾಚೀನ ಕಾಲದ ಮಹಿಳೆ ಶಿಕ್ಷಣವನ್ನು ಪಡೆಯುವ ಅವಕಾಶ ಹೊಂದಿದ್ದಳು ಎನ್ನಬಹುದು. ವೇದಗಳ ಕಾಲದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರಿಗೂ ಸಮಾನ ಶಿಕ್ಷಣ ಲಭ್ಯವಾಗುತ್ತಿತ್ತು. "ಅಥರ್ವಣವೇದ ಪುರುಷರಷ್ಟೇ ಸಮಾನವಾದ ಶಿಕ್ಷಣವನ್ನು ಸ್ತ್ರೀಗೆ ನೀಡಬೇಕೆಂದು ಪ್ರತಿಪಾದಿಸುತ್ತದೆ. ವೇದಗಳ ಕಾಲದಲ್ಲಿ ಬಾಲಕಿಯರಿಗಾಗಿ ಉಪನಯನ ಸಂಸ್ಕಾರವಿತ್ತು. ಮಗುವಿಗೆ ಸೂಕ್ತವಾದ ವಿದ್ಯಾಭ್ಯಾಸವನ್ನು ಯೋಗ್ಯ ಗುರುವಿನಿಂದ ಕೊಡಿಸಲು ವ್ಯವಸ್ಥೆ ಮಾಡುವ ಸಂಸ್ಕಾರವೇ ಉಪನಯನ. ಈ ಹಿನ್ನೆಲೆಯಲ್ಲಿ ಬಾಲಕ ಮತ್ತು ಬಾಲಿಕೆಯರಿಗೂ ಉಪನಯನ ಸಂಸ್ಕಾರವನ್ನು ನೀಡುವ ಮೂಲಕ ವೇದಾಧ್ಯಯನಕ್ಕೆ ಸನ್ನದ್ಧಗೊಳಿಸುತ್ತಿದ್ದರು. ಸ್ತ್ರೀಶಿಕ್ಷಣಕ್ಕೆ ವಿಶೇಷ ಒತ್ತು ನೀಡಲಾಗಿತ್ತು. ವೇದವು 'ವೈವಾಹಿಕ ಜೀವನದ ಯಶಸ್ಸು ಅವಳಿಗೆ ಅವಳ ಬ್ರಹ್ಮಚರ್ಯದಲ್ಲಿ ನೀಡಲಾದ ಸುಯೋಗ್ಯವಾದ ಶಿಕ್ಷಣವನ್ನು ಹೊಂದಿಕೊಂಡಿರುತ್ತದೆ ಎಂದು ಒತ್ತಿಹೇಳಿದೆ.

**ವಿಚ್ಛೇದನ ಮತ್ತು ಮಹಿಳೆ:**

ಸ್ತ್ರೀಯಾಗಲಿ, ಪುರುಷನಾಗಲಿ ವಿವಾಹ ವಿಚ್ಚೇದನ ಪಡೆಯಬಹುದಾದ ಅವಕಾಶಗಳನ್ನು ಕೌಟಿಲ್ಯ ತನ್ನ ಕೃತಿಯಲ್ಲಿ ಹೀಗೆ ನಿರೂಪಿಸಿದ್ದಾನೆ. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಸ್ಮೃತಿಕಾರರಾದ 'ನಾರದ' ಮತ್ತು 'ಕೌಟಿಲ್ಯ' ಇವರುಗಳ ಪ್ರಕಾರ ಪರಿಶುದ್ದೆಯೊಬ್ಬಳಿಗೆ ತನ್ನ ವಿವಾಹದ ನಂತರ ತನ್ನ ಗಂಡನಲ್ಲಿ ಅವನು ಮುಚ್ಚಿಟ್ಟಿದ್ದ ಗಂಭೀರ ದೋಷಗಳು ಕಂಡು ಬಂದಲ್ಲಿ ವಿವಾಹ ವಿಚ್ಚೇಧನಕ್ಕೆ ಹಿಂದೂ ಶಾಸ್ತ್ರಕಾರರು ಅವಕಾಶವನ್ನು ಕಲ್ಪಿಸಿದ್ದರು. ಅವಳು ಅವನನ್ನು ತಿರಸ್ಕರಿಸಬಹುದಾಗಿತ್ತು.

ಪತಿಯಾದವನು ಭ್ರಷ್ಟ ಚಾರಿತ್ರ್ಯ ಹೊಂದಿದ್ದರೆ, ತನ್ನ ಜೀವಕ್ಕೆ

ಗಂಡಾಂತರ ತರುವಂತಹವಾಗಿದ್ದರೆ, ಜಾತಿ ಭ್ರಷ್ಟನಾಗಿದ್ದರೆ, ತನ್ನ ಪುರುಷತ್ವವನ್ನು ಕಳೆದುಕೊಂಡಿದ್ದಲ್ಲಿ ಮತ್ತು ನೀಚತನಕ್ಕೆ ಇಳಿದ ಅಥವಾ ರಾಜದ್ರೋಹಿಯಾಗಿದ್ದರೆ, ದೇಶಾಂತರ ಹೋಗಿ 10 ವರ್ಷಗಳವರೆಗೂ ಬಾರದೆ ಹೋದಲ್ಲಿ ತನ್ನ ಗಂಡನಿಂದ ಮಕ್ಕಳಾಗದಿದ್ದರೆ, ಪತ್ನಿ ಪತಿಯನ್ನು ತೊರೆಯಬಹುದಾಗಿತ್ತು ಎಂಬುದನ್ನು ಕೌಟಿಲ್ಯನ ಶಾಸ್ತ್ರದಿಂದ ಅರಿಯಬಹುದಾಗಿದೆ.

**ಪವಿತ್ರ ಕಾರ್ಯಗಳಲ್ಲಿ ಮಹಿಳೆಯ ಸ್ಥಾನ:**

ಪೂರ್ವ ವೇದಗಳ ಕಾಲದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚು ಧಾರ್ಮಿಕ ಹಕ್ಕು ಮತ್ತು ಅವಕಾಶಗಳನ್ನು ಹೊಂದಿದ್ದರು. ವೇದಗಳ ಕಲಿಕೆ ಹಾಗೂ ಸ್ತೋತ್ರಗಳನ್ನು ರಚಿಸುವಲ್ಲಿ, ಕಂಠಪಾಠ ಮಾಡಲು ಮತ್ತು ಹೇಳಲು ಮುಕ್ತ ಅವಕಾಶಗಳಿದ್ದವು. ಉಪನಯನದಂತಹ ಧಾರ್ಮಿಕ ಕಾರ್ಯಗಳನ್ನು ಮಾಡುವ ಅವಕಾಶಗಳನ್ನು ಮಹಿಳೆ ಪಡೆದಿದ್ದಳು. ವಿವಾಹಿತ ಪತಿ, ಪತ್ನಿ ಒಂದಾಗಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಪತ್ನಿಯೊಡಗೂಡದೆ ಮಾಡಿದ ಧಾರ್ಮಿಕ ಕ್ರಿಯೆಗಳನ್ನು ದೇವತೆಗಳು ಸ್ವೀಕರಿಸುತ್ತಿರಲಿಲ್ಲ ಎಂಬ ಉಲ್ಲೇಖಗಳು ವೇದಗಳಲ್ಲಿ ಕಂಡುಬರುತ್ತವೆ. ಆದ್ದರಿಂದಲೇ ಧಾರ್ಮಿಕ ಕ್ರಿಯೆಗಳನ್ನು ಮಾಡಲು ಸ್ತ್ರೀ ಯೋಗ್ಯಳು ಎಂಬುದನ್ನು ಈ ಉಲ್ಲೇಖಗಳು ತಿಳಿಯಪಡಿಸುತ್ತವೆ. ಒಂದು ವೇಳೆ ಗಂಡ ಕುಟುಂಬದಿಂದ ದೂರವಿದ್ದಲ್ಲಿ ಅಥವಾ ಅವನ ಗೈರು ಹಾಜರಿಯಲ್ಲಿ ಪತ್ನಿಯೊಬ್ಬಳೇ ಪವಿತ್ರ ಕಾರ್ಯಗಳನ್ನು ನಡೆಸಬಹುದಿತ್ತು. ವಾಲಿ ಮತ್ತು ಸುಗ್ರೀವರ ಯುದ್ಧದಲ್ಲಿ ವಾಲಿಯ ಪತ್ನಿ ತಾರಾ ತನ್ನ ಗಂಡನ ಗೆಲುವಿಗಾಗಿ ಸ್ವಸ್ತಿಯಾಗ ಮಾಡಿದುದನ್ನು ಗಮನಿಸಿದರೆ ಪ್ರಾಚೀನ ಕಾಲದಲ್ಲಿ ಸ್ತ್ರೀಯು ಧಾರ್ಮಿಕ ಕ್ರಿಯೆಗಳಲ್ಲಿ ಭಾಗವಹಿಸಲು ಸಂಪೂರ್ಣ ಹಕ್ಕುಳ್ಳವಳಾಗಿದ್ದಳು. ಮೇಲಿನ ಎಲ್ಲಾ ಪುರಾವೆಗಳು ವೇದಗಳ ಕಾಲದಲ್ಲಿ ಮಹಿಳಾ ಧಾರ್ಮಿಕ ಹಕ್ಕು ಎನ್ನುವುದು ಕೇವಲ ಔಪಚಾರಿಕದ ಮಾತಾಗಿರದೆ, ವಾಸ್ತವಿಕವಾಗಿ ಅನುಭವಿಸಿದ ಮಾತಾಗಿತ್ತು.

ಮನುಸ್ಮೃತಿಯ ನಂತರ ಮಹಿಳೆಯರನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಉಪಭೋಗದ ವಸ್ತುವಾಗಿ, ಅಡುಗೆಮನೆಗೆ ಸೀಮಿತಗೊಳಿಸಲಾಯಿತು. ಉಪನಯನ ಸಂಸ್ಕಾರವನ್ನು ಸ್ತ್ರೀಯರಿಗೆ ನಿರಾಕರಿಸಲಾಯಿತು. ಪಾತಿವ್ರತ್ಯವನ್ನು ವೈಭವೀಕರಿಸಿ ಪುರುಷರಿಗೆ ಅಧೀನರನ್ನಾಗಿಸಲಾಯಿತು. ಸ್ತ್ರೀಯರ ಸ್ವಂತ ವ್ಯಕ್ತಿತ್ವಕ್ಕೆ ಬೆಲೆಯಿಲ್ಲದಂತಾಯಿತು. ವಿವಾಹ ವಿಚ್ಛೇದನ ಮತ್ತು ಪುನರ್‌ವಿವಾಹದ ಅವಕಾಶ ನಿರಾಕರಿಸಿ ಅವಳನ್ನು ನಿರ್ಜಿವ ವಸ್ತುವೆಂದು ಪರಿಗಣಿಸಿ, ಸೌಂದರ್ಯ ವರ್ಧಕಗಳೆಂದು, ಆಸೆಬುರುಕಳೆಂದು, ಆಭರಣಗಳ ಮೋಹಕ್ಕೆ ಒಳಗಾದವಳೆಂದು

ಚಿತ್ರಿಸಲಾಯಿತು. ಈ ರೀತಿಯ ಅನರ್ಹತೆಗಳಿಗೆ ಸ್ತ್ರೀಯರನ್ನು ಗುರಿಮಾಡಿದ್ದುದರ ಫಲವಾಗಿ ಭಾರತೀಯ ಮಹಿಳೆ ಹಲವಾರು ಬಗೆಯ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಠಿಯಿಂದ ನಿರ್ಲಕ್ಷ್ಯಕ್ಕೊಳಗಾದಳು.

**ಮಧ್ಯಕಾಲಿನಯುಗದಲ್ಲಿ ಮಹಿಳೆ:**

ಮುಸ್ಲಿಮರ ದಾಳಿಯಿಂದ ಭಾರತದಲ್ಲಿ ಸ್ತ್ರೀಯರ ಸ್ಥಾನ ತಳಸ್ಥಿತಿಯನ್ನು ತಲುಪಿದವು. ಭಾರತದ ಇತಿಹಾಸದ ದಿಕ್ಕು ಬದಲಾಯಿತು. ಸ್ತ್ರೀ ಸಮಸ್ಯೆಗಳು ಸಾಮಾಜಿಕ ಪಿಡುಗುಗಳಾಗಿ ಪರಿವರ್ತಿತವಾದವು. ಹಾಗೂ ಸ್ತ್ರೀ ಶೋಷಣೆ ಎಲ್ಲೆ ಮೀರಿತ್ತು. ಸ್ತ್ರೀಯರ ಪಾಲಿಗೆ ಅವರ ಅಂತಸ್ತು ಮತ್ತು ಸ್ಥಾನಮಾನಗಳ ದೃಷ್ಟಿಯಿಂದ ಜಾತಿವಾದಿಗಳ ಹಾಗೂ ಸಂಪ್ರದಾಯವಾದಿಗಳ ಕಪಿಮುಷ್ಟಿಗೆ ಸಿಲುಕಿದರು. ಅವರ ಸ್ವಾತಂತ್ರ್ಯ, ಹಕ್ಕು, ಸಮಾನಾವಕಾಶಗಳಿಗೆ ಧಕ್ಕೆ ಬಂದಿತು. ಸ್ತ್ರೀಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಯಿತು. ಶಾಸ್ತ್ರಗಳ ಬಗ್ಗೆ ಜ್ಞಾನ ಹೆಚ್ಚಿಸಿಕೊಳ್ಳುವುದಿರಲಿ, ಸ್ತ್ರೀಯರ ಆಕ್ಷರಾಭ್ಯಾಸಕ್ಕೆ ಅವಕಾಶವಿಲ್ಲವಾಯಿತು. ಸ್ತ್ರೀಯರ ಅಂತಸ್ತು ಎಂಬುದು ಪುರುಷರ ಅನುಬಂಧವೆಂಬಂತಹ ಸ್ಥಿತಿಗೆ ಬಂದಿತು. ತಕ್ಷಶಿಲಾದ ಆಡಳಿತಗಾರರು ಮತ್ತು ಬಂಗಾಳದ ರಾಯಭಾಗ ಕಾನೂನು ಪಾಲಕರು ಸ್ತ್ರೀಯರನ್ನು ಗುಲಾಮರ ಸ್ಥಿತಿಗೆ ತಂದಿಟ್ಟರು. ಸ್ತ್ರೀಯರು ಆಸ್ತಿಯ ಹಕ್ಕಿನಿಂದ ವಂಚಿತರಾದರು. ನಿಯೋಗ ಮತ್ತು ವಿಧವಾ ಪುನರ್ವಿವಾಹದ ಅವಕಾಶಗಳನ್ನು ರದ್ದುಗೊಳಿಸಲಾಯಿತು. ಬಾಲ್ಯ ವಿವಾಹವನ್ನು ಶಿಫಾರಸ್ಸು ಮಾಡಿದ್ದರಿಂದ ಸ್ತ್ರೀಯರು ಹಲವಾರು ದುಷ್ಪ-ರಿಣಾಮಗಳಿಗೆ ಒಳಪಡಬೇಕಾಯಿತು.

**ಬಾಲ್ಯ ವಿವಾಹ ಪದ್ಧತಿ:**

ಬಾಲ್ಯ ವಿವಾಹ ಪದ್ಧತಿಯು ಧರ್ಮಶಾಸ್ತ್ರಗಳ ಅವಧಿಯಲ್ಲಿ ಹುಟ್ಟಿ ಬೆಳೆದು ಬಂದಿದ್ದರೂ ಮಧ್ಯಕಾಲೀನ ಸಮಾಜದಲ್ಲಿ ಪರಿಹಾರವಾಗದಂತಹ ಪಿಡುಗಾಗಿ ಮಾರ್ಪಟ್ಟಿತು. ಮುಸ್ಲಿಂ ದಾಳಿಕಾರರು ತಮ್ಮ ಹೆಣ್ಣು ಮಕ್ಕಳನ್ನು ಶೀಲಹರಣ ಮಾಡಬಹುದೆಂಬ ಭಯದಿಂದ ಬಾಲ್ಯಾವಸ್ಥೆಯಲ್ಲಿರುವಾಗಲೇ ವಿವಾಹಮಾಡಲು ಪ್ರಾರಂಭಿಸಿದರು. ಇದರಿಂದ ಅಪ್ರಾಪ್ತ ವಯಸ್ಸಿನಲ್ಲಿ ವಿವಾಹವಾದ ಹೆಣ್ಣು ಮಕ್ಕಳು ಕೌಟುಂಬಿಕ ಹೊರೆ ಹೊರಲಾರದೆ ಅವರ ದೈಹಿಕ ದುರ್ಬಲತೆಯು ಅವರ ಗಂಡಂದಿರನ್ನು ಅನೈತಿಕ ಲೈಂಗಿಕ ಸಂಬಂಧಗಳಲ್ಲಿ ತೊಡಗುವಂತೆ ಮಾಡಿತು. ಅತಿ ಚಿಕ್ಕ ವಯಸ್ಸಿನಲ್ಲಿ ತಮ್ಮ ಗಂಡಂದಿರನ್ನು ಕಳೆದುಕೊಂಡು ವಿಧವೆಯರಾದ ಚಿಕ್ಕ ಮಕ್ಕಳ ಪಾಡು ನರಕ ಸದೃಶವಾಗತೊಡಗಿತು. ಬಾಲ್ಯ ವಿವಾಹದಂತಹ ಸಮಸ್ಯೆಗಳು ವರದಕ್ಷಿಣೆ ಪದ್ಧತಿಯಂತಹ ಪಿಡುಗನ್ನು ಸೃಷ್ಟಿಸಿತು. ಪಾತಿವ್ರತ್ಯದಂತಹ ಕಲ್ಪನೆಗಳು

ವಿಧವಾ ಸ್ತ್ರೀಯನ್ನು ಸತಿಪದ್ಧತಿಯಂತಹ ಸಮಸ್ಯೆಗಳಿಗೆ ತಳ್ಳಿದವು. ಸತಿಸಹಗಮನಕ್ಕೆ ಹೋಗದ ವಿಧವೆಯ ಬಾಳು ಎಲ್ಲರ ಅವಹೇಳನಕ್ಕೆ ಗುರಿಯಾಯಿತು. ಇವು ಪರೋಕ್ಷವಾಗಿ ದೇವದಾಸಿ ಪದ್ಧತಿ ಹಾಗೂ ವೇಶ್ಯಾವಾಟಿಕೆಯಂತಹ ಸಮಸ್ಯೆಗಳಿಗೂ ಕಾರಣವಾಯಿತು.

**ಸಂಪ್ರದಾಯ ಮತ್ತು ಮಹಿಳೆ:**

ಧರ್ಮಶಾಸ್ತ್ರಗಳು ವಿಧವಾ ಪುನರ್ವಿವಾಹದ ಮೇಲೆ ವಿವಿಧ ನಿಷೇಧಗಳನ್ನು ಹೇರಿದ್ದರಿಂದ ಮತ್ತು ಪಾತಿವ್ರತ್ಯವನ್ನು ವೈಭವೀಕರಿಸಿದ್ದರಿಂದ ವಿಧವೆಯರು ಪುನಃ ವಿವಾಹ ಮಾಡಿಕೊಳ್ಳಲಾಗದೆ ಹಾಗೆಯೆ ಉಳಿದರು. ಸ್ವಾತಂತ್ರ ಅಭಿವೃದ್ಧಿಗೆ ಪೂರಕವಾಗಿ ದೇವದಾಸಿಯಂತಹ ದುಷ್ಟ ಆಚರಣೆಗಳು ಮಹಿಳಾ ಸ್ಥಿತಿಯನ್ನು ಕೆಳಗಿಳಿಸಿದ ಸಮಸ್ಯೆಗಳಾಗಿವೆ ಎನ್ನಬಹುದು. ದೇವರ ಆರಾಧನೆಯಲ್ಲಿ ನೃತ್ಯ–ಸಂಗೀತಗಳು ವ್ಯಾಪಕ ಬಳಕೆ ಆರಂಭವಾದ ಮೇಲೆ ದೇವದಾಸಿಪದ್ಧತಿ ಬೆಳೆದು ಬಂದಿತು. ಕಾಲಾಂತರದಲ್ಲಿ ದೇವದಾಸಿಯರನ್ನು ವೇಶ್ಯೆಯರನ್ನಾಗಿ ಪರಿವರ್ತಿಸಿ ಊರಿನ ಶ್ರೀಮಂತರು ಮತ್ತು ಉಳ್ಳವರ ಕಾಮತೃಷೆಯನ್ನು ತಣಿಸುವ ವ್ಯವಸ್ಥೆಯಾಯಿತು. ಈ ದೇವದಾಸಿಯರಿಗೆ ಹುಟ್ಟುವ ಮಕ್ಕಳು ಹೆಣ್ಣಾಗಿದ್ದರೆ ಅವರನ್ನು ದೇವದಾಸಿಯರನ್ನಾಗಿಸಬೇಕಾಗಿತ್ತು. ಬಹುಸಂಖ್ಯಾತ ಹೆಣ್ಣು ಮಕ್ಕಳು ಈ ಬಗೆಯ ಪದ್ಧತಿಗೆ ಬಲಿಪಶುಗಳಾದರು. ಈ ರೀತಿಯ ಪದ್ಧತಿಗಳ ವಿವಿಧ ರೂಪಗಳಾಗಿ ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ರೂಢಿಯಲ್ಲಿದ್ದ ಗೆಜ್ಜೆಪೂಜೆ, ಬಸವೀಪದ್ಧತಿ, ಜೋಗತಿಪದ್ಧತಿ, ಬೆತ್ತಲೆಸೇವೆ ಮುಂತಾದ ಪದ್ಧತಿಗಳು ಒಂದಲ್ಲಾ ಒಂದು ರೂಪದಲ್ಲಿ ಸ್ತ್ರೀಯರನ್ನು ವೇಶ್ಯೆಯರನ್ನಾಗಿಸುತ್ತಾ ಸ್ತ್ರೀಕುಲವನ್ನು ಜರ್ಜ–ರಿತಗೊಳಿಸಿದವು.

**ವರ್ಣವ್ಯವಸ್ಥೆಯಲ್ಲಿ ಮಹಿಳೆಯ ಸ್ಥಾನ:**

ಸ್ತ್ರೀಯರು ತಮ್ಮ ಮುಖವನ್ನು ಪರಪುರುಷರಿಗೆ ಕಾಣದಂತೆ ಬಟ್ಟೆಯೊಂದನ್ನು ಹಾಕಿಕೊಳ್ಳುವ ಪದ್ಧತಿಯನ್ನು 'ಪರದಾಪದ್ಧತಿ' ಎಂದು ಕರೆಯಲಾಗುತ್ತದೆ. ಈ ರೀತಿ ಪರದಾ ಹಾಕಿಕೊಳ್ಳುವ ಪದ್ಧತಿಯು ಭಾರತದಲ್ಲಿ ಮಧ್ಯಕಾಲೀನ ಮುಸ್ಲಿಂ ಸಮಾಜದಲ್ಲಿ ವ್ಯಾಪಕವಾಗಿದ್ದು, ಭಾರತದಲ್ಲಿ ಮುಸ್ಲಿಂ ಆಕ್ರಮಣಕ್ಕೂ ಮೊದಲೇ ಕೇವಲ ಕುಲೀನರಲ್ಲಿ, ಶ್ರೀಮಂತ ಕುಟುಂಬದವರಲ್ಲಿ ನವಿರಾದ ತೆಳುವಾದ 'ಅವಕುಂದನ'ವನ್ನು ಧರಿಸುವ ಪದ್ಧತಿಯಿತ್ತು. ಮುಸ್ಲಿಂ ಆಕ್ರಮಣಕಾರರಿಂದ ಹಿಂದೂ ಸ್ತ್ರೀಯರ ಮೇಲಿನ ಅತ್ಯಾಚಾರಗಳು ಹೆಚ್ಚಾದಾಗ ತಮ್ಮ ರೂಪ ಸೌಂದರ್ಯಗಳೇ ತಮಗೆ ಶತ್ರುಗಳಾಗಬಾರದೆಂದು ಹಿಂದೂ ಧರ್ಮದ ಕೆಳಜಾತಿಯ ಹೆಣ್ಣು ಮಕ್ಕಳು

ಪರದಾ ಪದ್ಧತಿಯನ್ನು ಅನುಸರಿಸುತ್ತಿದ್ದರು. ವರ್ಣಗಳ ದೃಷ್ಠಿಯಿಂದ ನೋಡಿದರೆ ಕೆಳವರ್ಣದ ಅಥವಾ ಕೆಳಜಾತಿಯ ಸ್ತ್ರೀಯರು ಮೇಲ್ಜಾತಿಯ ಕುಲೀನ ಸ್ತ್ರೀಯ–ರಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಹೊಂದಿದ್ದರು ಎನ್ನಬಹುದು. ಪರದಾ ಧರಿಸುವ, ವೈಧವ್ಯದಿಂದ ಒಂಟಿಯಾಗಿ ಬಾಳಬೇಕಾದ, ವಿವಾಹ ವಿಚ್ಛೇಧನದ ಮತ್ತು ವಿಧವಾ ಪುನರ್ ವಿವಾಹದ ಹಕ್ಕುಗಳಿಲ್ಲದೆ ಸಾಮಾಜಿಕ ಸಮಸ್ಯೆಗಳಲ್ಲಿ ತೊಳಲಾಡಬೇಕಾದ ಮೇಲ್ವರ್ಗದ ಹೆಣ್ಣು ಮಕ್ಕಳ ಸ್ಥಿತಿ ಚಿಂತಾಜನಕವಾಗಿತ್ತು. ಕೆಳಜಾತಿಯ ಮಹಿಳೆಯರು ವ್ಯವಸಾಯ, ಕೃಷಿಕಾರ್ಯ, ವ್ಯಾಪಾರ ಮುಂತಾದ ವೃತ್ತಿಗಳಲ್ಲಿ ತೊಡಗಿ ಮುಕ್ತವಾಗಿ ಸಂಚರಿಸುವ ಪುನರ್ ವಿವಾಹವಾಗುವ, ಜನರೊಂದಿಗೆ ಬೆರೆಯುವ ಸ್ವಾತಂತ್ರ್ಯವನ್ನು ಹೊಂದಿದ್ದಳು. ಆದರೆ ಮೇಲ್ವರ್ಗದ ಸ್ತ್ರೀಯರು ಈ ಸೌಲಭ್ಯಗಳಿಂದ ವಂಚಿತರಾಗಿದ್ದರು.

**ಸತಿಸಹಗಮನ ಪದ್ಧತಿ ಮತ್ತು ಮಹಿಳೆ:**

ವಿವಿಧ ಕಾರಣಗಳಿಂದಾಗಿ ಆಚರಣೆಗೆ ಬಂದ ಈ ಪದ್ಧತಿ ಮುಸ್ಲಿಂ ಆಕ್ರಮಣಕಾರರಿಂದ ಹಿಂದೂ ಸ್ತ್ರೀಯರು 'ತಮ್ಮ ಪಾತಿವ್ರತ್ಯವನ್ನು ಕಾಪಾಡಿಕೊಳ್ಳಲು ಆತ್ಮಬಲಿದಾನ' ಮಾಡಿಕೊಳ್ಳುವ ಅನಿವಾರ್ಯ ಸ್ಥಿತಿಯನ್ನು ಅಂದಿನ ಸಮಾಜ ತಂದಿಟ್ಟಿತು. ವರ್ಣ ವ್ಯವಸ್ಥೆಯಲ್ಲಿ ಕ್ಷತ್ರಿಯರು ಮತ್ತು ಬ್ರಾಹ್ಮಣ ವರ್ಣಗಳಲ್ಲಿ ಹೆಚ್ಚಾಗಿ ರೂಢಿಯಲ್ಲಿದ್ದ ಈ ಪದ್ಧತಿ, ಉತ್ತರ ಭಾರತದಲ್ಲಿ ಹೆಚ್ಚಾಗಿ ರೂಢಿಯಲ್ಲಿತ್ತು. ಪಾತಿವ್ರತ್ಯದ ವೈಭವೀಕರಣದಿಂದಾಗಿ ಬಲಿದಾನ ಮಾಡಿಕೊಳ್ಳಲು ಇಚ್ಛೆ ಪಡದವರೂ ಕೂಡ ಬಲವಂತವಾಗಿ ಚಿತೆ ಏರಲೇಬೇಕಾಯಿತು. ಬಲಿದಾನಕ್ಕೆ ಸಿದ್ಧವಿಲ್ಲದೆ ಬದುಕ ಬಯಸುವವರನ್ನು ನಿಷ್ಕರುಣೆಯಿಂದ ಒತ್ತಾಯ ಪೂರ್ವಕವಾಗಿ ಪತಿಯ ಚಿತೆಯೊಂದಿಗೆ ದೂಡುವ ಪ್ರಕರಣಗಳೂ ನಡೆಯುತ್ತಿದ್ದವು. ರಜಪೂತ ಸಮುದಾಯದಲ್ಲಿ ಇದು ಕಡ್ಡಾಯವಾಗಿತ್ತು.

**ಮುಸ್ಲಿಂ ಮಹಿಳೆಯರ ಸ್ಥಿತಿಗತಿ:**

ಮುಸ್ಲಿಂ ಆಳ್ವಿಕೆಯಲ್ಲಿ ಮುಸ್ಲಿಂ ಮಹಿಳೆಯರ ಸ್ಥಿತಿ ಹಿಂದೂ ಸ್ತ್ರೀಯರುಗಳ ಸ್ಥಿತಿಗತಿಗಿಂತ ಹೀನಾಯವಾಗಿತ್ತು. ಬಹುಪತ್ನಿತ್ವ ಪದ್ಧತಿ ಮುಸ್ಲಿಂರಲ್ಲಿ ಇದ್ದುದ–ರಿಂದ, ವಿಚ್ಛೇದನಕ್ಕೆ ಪುರುಷರಿಗೆ ಹೆಚ್ಚಿನ ಅವಕಾಶ ಇದ್ದುದರಿಂದ ಪುರುಷರನ್ನು ಅವಲಂಬಿಸಿಯೇ ಮಹಿಳೆ ಬಾಳಬೇಕಾದ ಸ್ಥಿತಿ ಹೆಚ್ಚಾಗಿದ್ದುದು, ಆಸ್ತಿಯ ಒಡೆತನದ ಹಕ್ಕು ಇಲ್ಲದಿದ್ದು, ಅಡಿಯಿಂದ ಮುಡಿಯವರೆಗೆ ಪರದಾ ಧರಿಸಿಯೇ ತಿರುಗಾಡಬೇಕಾಗಿದ್ದುದು, ಅಶಿಕ್ಷಿತಳಾಗಿಯೇ ಇದ್ದುದು, ಮುಂತಾದ ಅಂಶಗಳು ಅವಳ ಸ್ಥಾನವನ್ನು ತುಂಬಾ ಕೆಳಗಿಳಿಸಿದ್ದವು. ಮುಸ್ಲಿಂ ವೈಯಕ್ತಿಕ ಕಾನೂನು

ಮುಸ್ಲಿಂ ಮಹಿಳೆಯರಿಗೆ ಹೆಚ್ಚಿನ ಅಧಿಕಾರ ನೀಡಿದ್ದಾಗಲೂ ಸಹ ಅದರ ಆಚರಣೆಯ ಮಾತು ಕನಸಾಗಿಯೇ ಇತ್ತು ಎನ್ನಬಹುದು.

**ಸ್ತ್ರೀವಾದ ಚಳವಳಿ:**

ಸ್ತ್ರೀವಾದಿ ಚಳವಳಿ ದಲಿತ ಬಂಡಾಯದ ಜೊತೆ ಜೊತೆಗೆ ನಡೆದ ಇನ್ನೊಂದು ಚಳವಳಿ. 1975ರ ಅಂತರಾಷ್ಟ್ರೀಯ ಮಹಿಳಾ ವರ್ಷದಿಂದ ಈ ಚಳವಳಿ ಪ್ರಾರಂಭಗೊಂಡಿತು. ಗಮನಾರ್ಹ ಪ್ರಮಾಣದಲ್ಲಿ ಕನ್ನಡ ಸಾಹಿತಿಗಳು ಸ್ತ್ರೀವಾದಕ್ಕೆ ತೆರೆದುಕೊಳ್ಳತೊಡಗಿದರು. 'ಸಮಾಜ, ಉದ್ಯೋಗ ಮತ್ತು ಕುಟುಂಬಗಳಲ್ಲಿ ತುಳಿತಕ್ಕೊಳಗಾದ ಮಹಿಳೆಯರು ಹಾಗೂ ಶೋಷಣೆಯ ಬಗ್ಗೆ ಅವರಿಗೆ ಅರಿವು ಮೂಡಿಸಿ, ಈ ಪರಿಸ್ಥಿತಿಯನ್ನು ಪರಿವರ್ತಿಸಲು ಪುರುಷರು ಮತ್ತು ಸ್ತ್ರೀಯರು ಸೇರಿ ನಡೆಸುವ ಪ್ರಯತ್ನಪೂರ್ವಕ ಕ್ರಿಯೆಯೇ ಸ್ತ್ರೀವಾದ' ಎಂದು ಸ್ತ್ರೀವಾದಿ ನೆಲೆಯಲ್ಲಿ ವ್ಯಾಖ್ಯಾನಿಸಲಾಯಿತು. ಎಂಬತ್ತರ ದಶಕದಲ್ಲಿ ಸ್ತ್ರೀವಾದಿ ನೆಲೆಯ ಚಿಂತನೆ ಪ್ರಖರವಾಯಿತು. ಪುರುಷ ಪ್ರಧಾನ ವ್ಯವಸ್ಥೆಯನ್ನು ಅರ್ಥಪೂರ್ಣವಾಗಿ ಪ್ರಶ್ನಿಸುವ ಈ ಒಳ ಬಂಡಾಯದ ದನಿ ಕನ್ನಡ ಸಾಹಿತ್ಯ ರಚನೆಗೆ ಹೊಸ ಆಯಾಮವನ್ನು ಸೇರಿಸಿತು.

ಒಂದು ಕಾಲದಲ್ಲಿ ವಿಧವೆಯರ ತಲೆಕೂದಲು ಬೋಳಿಸಿ, ಕುಂಕುಮ ಅಳಿಸಿ, ಬಳೆಒಡೆದು ತೀರಾ ವಿಕಾರವಾಗಿ ಮಾಡುತ್ತಿದ್ದರು. ಅವಳ ಉಡುಗೆ–ತೊಡುಗೆ, ನಡವಳಿಕೆಗಳ ಮೇಲೆ ಇನ್ನಿಲ್ಲದ ನಿರ್ಬಂಧಗಳನ್ನು ಹೇರಿ ತೀರಾ ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದರು. ಇಂದು ವಿಧವೆಯರ ಇರುವಿಕೆಯಲ್ಲಿ ಮೊದಲಿನಷ್ಟು ವಿಕೃತಿ, ಕ್ರೌರ್ಯಗಳಿಲ್ಲವಾದರೂ ಅವರ ಬದುಕಿನಲ್ಲಿ ಸಂಪೂರ್ಣ ಬದಲಾವಣೆ ಬಂದಿಲ್ಲ. ಇಂದಿಗೂ ಆಧುನಿಕರೆನಿಸಿಕೊಂಡು ಮೆರೆಯುವ ಮನೆಗಳಲ್ಲಿಯೂ ಧಾರ್ಮಿಕ, ಸಾಂಪ್ರದಾಯಿಕ ಕಾರ್ಯಚಟುವಟಿಕೆಗಳಲ್ಲಿ ಸ್ವತಃ ವಿಧವೆಯರೇ ದೂರ ಉಳಿಯುತ್ತಾರೆ. ಅವರನ್ನು ಸಂಪ್ರದಾಯದ ಹೆಸರಿನಲ್ಲಿ ದೂರವಿಡಲಾಗುತ್ತದೆ. ಆಕೆ ಈ ಅವಮಾನವನ್ನು ಮೌನವಾಗಿ ಅನುಭವಿಸಬೇಕಾಗುತ್ತದೆ.

ದೇವರು, ಧರ್ಮಾಚರಣೆಗಳು, ದೇವರ ಭಯದಿಂದಲೂ ಜನರು ಅಂಧ ನಂಬಿಕೆಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಜನರಲ್ಲಿ ವೈಜ್ಞಾನಿಕ, ವೈಚಾರಿಕ ಮನೋಭಾವನೆಗಳು ಮೂಡದ ಹೊರತು ಇಂಥ ನಂಬಿಕೆಗಳನ್ನು ಹೊಡೆದೋಡಿಸಲು ಸಾಧ್ಯವಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಿದೆ. ಮಹಿಳೆಯರು ಮುಟ್ಟಾದಾಗ ಅವರನ್ನು ಬೇರೆಯೇ ಕೂರಿಸುವಂತಹ ಆಚರಣೆ ಹಾಗೂ ಊರಿನಿಂದ ಹೊರವಲಯದಲ್ಲಿ ಬಿಡಾರ ಹೂಡಿಸುವ ಆಚರಣೆಗಳು

ಇನ್ನೂ ಕೆಲ ಜನಾಂಗಗಳಲ್ಲಿ ರೂಢಿಯಲ್ಲಿದೆ.

ಸ್ತ್ರೀಯರ ಆರೋಗ್ಯ ಮತ್ತು ಪರಿಸ್ಥಿತಿ ಕುರಿತು ಸಮಾಜವು ಕಾಳಜಿ ಮತ್ತು ಸಕಾಲಿಕ ಎಚ್ಚರಿಕೆ ವಹಿಸುವುದಿಲ್ಲ. ಆದ್ದರಿಂದ ಅವರು ತಮ್ಮ ಅಸಂಖ್ಯಾತ ರೋಗ ಋಜಿನಗಳಿಗೆ ಮಂತ್ರ, ತಾಯಿತ, ಬಾಬಾಗಳ ಕಡೆ ಹೋಗುತ್ತಾರೆ. ಸಮಸ್ಯೆಗಳಿಂದ ಹೊರಬರುವ ಸಾಧ್ಯತೆ ಇಲ್ಲದಿರುವಾಗ ವ್ರತ, ನೇಮ, ಉಪವಾಸಗಳತ್ತ ಆಕರ್ಷಿತರಾಗುತ್ತಾರೆ. ಹೇಳಿಕೊಳ್ಳಲಾಗದ ಒತ್ತಡ ದೌರ್ಜನ್ಯಗಳಿಗೆ ಬಲಿಯಾದಾಗ ಮನೋರೋಗ, ಮಾನಸಿಕ ಅಸ್ವಸ್ಥತೆಗೆ ಬಲಿಯಾಗುತ್ತಾರೆ. ಮಹಿಳೆಯರನ್ನು ನಡೆಸಿಕೊಳ್ಳುವ ರೀತಿಯಲ್ಲಿ ಬದಲಾವಣೆ ತರಲು ಸಾಧ್ಯವಾಗುವುದಾದರೆ ಅರ್ಧದಷ್ಟು ಕಂದಾಚಾರಗಳಿಂದ ಸ್ತ್ರೀಯರನ್ನು ರಕ್ಷಿಸಬಹುದು. ಒಟ್ಟಾರೆ ನಮ್ಮ ಪರಂಪರಾಗತ ನಂಬಿಕೆಗಳಲ್ಲಿ ಸ್ತ್ರೀವಿರೋಧಿ ದೃಷ್ಟಿ–ಧೋರಣೆಗಳು ಓತಪ್ರೇತವಾಗಿ ತುಂಬಿಕೊಂಡಿವೆ. ಈ ನಂಬಿಕೆಗಳ ಮೂಲೋತ್ಪಾಟನೆಗಾಗಿ ಮೂಲಭೂತ ಬದಲಾವಣೆ ತರಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಶ್ರೀಮತಿ ಹೆಚ್. ಎಸ್. (2001). ಆಧುನಿಕ ಭಾರತದಲ್ಲಿ ಮಹಿಳೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
2. ಜನಿನ್ ಬೇಗಂ ನಾ. (2000). ಗ್ರಾಮೀಣ ಬದುಕು ಮತ್ತು ಮಹಿಳೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
3. ಗಾಯತ್ರಿ ಎನ್. (2013). ಮಹಿಳೆ ಬಿಡುಗಡೆಯ ಹಾದಿಯಲ್ಲಿ. ನವಕರ್ನಾಟಕ ಪಬ್ಲಿಕೇಶನ್ಸ್. ಬೆಂಗಳೂರು.